ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಇಜಿ.1/ಸಿಆರ್-5/2018-19

ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)ರವರ ಕಛೇರಿ,
1ನೇ ಮಹಡಿ, ವಾಣಿಜ್ಯ ತೆರಿಗೆಗಳ ಕಾರ್ಯಾಲಯ,
ಗಾಂಧೀನಗರ, ಬೆಂಗಳೂರು, ದಿನಾಂಕ: 21/10/2019

**ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ: 06 /2019-20**

**ವಿಷಯ:** ಖಜಾನೆ-2ರ ಮೂಲಕ ರಾಜಸ್ವ ಜಮೆ ಮತ್ತು ಅವುಗಳ ಸಮನ್ವಯೀಕರಣ (Revenue Receipts through Khajane-2 and reconciliation thereof) ಕುರಿತು.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 18 ಟಿಎಆರ್ 2019 ದಿನಾಂಕ: 09/07/2019

*****

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಳೆದ ಒಂದು ದಶಕದಿಂದ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಸಂದಾಯವಾಗುವ ರಾಜಸ್ವ ಜಮೆಗಳ ಕುರಿತು ಸಮಗ್ರ ಗಣಕೀಕರಣದ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು. ಕಛೇರಿಯಲ್ಲಿ ಸ್ವೀಕರಿಸಲಾದ ಚೆಕ್/ಡಿಡಿ/ನಗದುಗಳನ್ನು ಗಣಕೀಕರಣ ವ್ಯವಸ್ಥೆಯಲ್ಲಿ ಅಳವಡಿಸಿ ಚಲನ್‌ಗಳನ್ನು ಸೃಜಿಸಿ ಸದರಿ ಚೆಕ್/ಡಿಡಿ/ನಗದುಗಳನ್ನು ಏಜೆನ್ಸಿ ಬ್ಯಾಂಕ್‌ನ ಮುಖಾಂತರ ಸರ್ಕಾರದ ಖಜಾನೆಗೆ ಜಮಾ ಮಾಡಲು ಸಲ್ಲಿಸಲಾಗುತ್ತಿತ್ತು. ಬೆಂಗಳೂರಿನಲ್ಲಿರುವ ಕಛೇರಿಗಳಿಗೆ ಸಂಬಂಧಪಟ್ಟಂತೆ, ನಗದೀಕರಣಗೊಂಡ ನಂತರ ಏಜೆನ್ಸಿ ಬ್ಯಾಂಕ್/ಖಜಾನೆಯಿಂದ ಚಲನ್‌ಗಳನ್ನು ಆನ್‌ಲೈನ್ ಮುಖಾಂತರ ಇಲಾಖೆಯ ಗಣಕೀಕರಣ ವ್ಯವಸ್ಥೆಯಲ್ಲಿ ಅಳವಡಿಸಲಾಗಿತ್ತು. ಬೆಂಗಳೂರೇತರ ಕಛೇರಿಗಳಲ್ಲಿ ಆಯಾ ಅಧಿಕಾರಿಗಳು ನಗದೀಕರಿಸಲಾದ ಚೆಕ್/ಡಿಡಿ/ನಗದುಗಳ ವಿವರಗಳ ಚಲನ್‌ಗಳನ್ನು ಸಂಬಂಧಪಟ್ಟ ಖಜಾನೆ ಅಧಿಕಾರಿಗಳಿಂದ ಪಡೆದು ಇಲಾಖೆಯ ಗಣಕೀಕೃತ ವ್ಯವಸ್ಥೆಯಲ್ಲಿ ಅಳವಡಿಸಲಾಗುತ್ತಿತ್ತು. ಹಾಗಾಗಿ, ಚೆಕ್/ಡಿಡಿ/ನಗದು ಇಲಾಖೆಯ ಕಛೇರಿಗಳಲ್ಲಿ ಸ್ವೀಕರಿಸಿದ ಕ್ಷಣದಿಂದ ಖಜಾನೆಯಲ್ಲಿ ನಮೂದಾದ ಚಲನ್‌ಗಳ ವಿವರಗಳನ್ನು ಪಡೆದುಕೊಂಡು ಕರದಾತರ ಲೆಕ್ಕಕ್ಕೆ ಜಮಾ ಮಾಡುವ ಪೂರ್ಣ ಪ್ರಮಾಣದ ಗಣಕೀಕರಣದ ವ್ಯವಸ್ಥೆ ಜಾರಿಯಲ್ಲಿತ್ತು.

ಆದರೆ ಖಜಾನೆ-2 ಕಾರ್ಯಾರಂಭವಾದ ನಂತರ ಹಾಗೂ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದ ನಂತರ ಇಲಾಖೆಯ ಕಛೇರಿಗಳಲ್ಲಿ ಸರಕು ಮತ್ತು ಸೇವಾ ತೆರಿಗೆಯ ಜಮೆಯನ್ನು ಹೊರತುಪಡಿಸಿ ಉಳಿದೆಲ್ಲಾ ಅಧಿನಿಯಮಗಳಲ್ಲಿ ಸ್ವೀಕರಿಸಿದ ಚೆಕ್/ಡಿಡಿ/ನಗದುಗಳನ್ನು ಖಜಾನೆಗೆ ಜಮಾ ಮಾಡಲು ಸದರಿ ಅಧಿಕಾರಿಗಳು ನೇರವಾಗಿ ಖಜಾನೆ-2ರ ಜಾಲತಾಣ https://k2.karnataka.gov.in ರ ಸಂಪರ್ಕ ಹೊಂದಿ ಆಯಾ ಲೆಕ್ಕಶೀರ್ಷಿಕೆಯಡಿ ಚಲನ್‌ಗಳನ್ನು ಸೃಜಿಸಿ ಸದರಿ ಉಪಕರಣಗಳಾದ ಚೆಕ್/ಡಿಡಿ/ನಗದುಗಳನ್ನು ಏಜೆನ್ಸಿ ಬ್ಯಾಂಕ್‌ಗೆ ಜಮಾ ಮಾಡುವ ವ್ಯವಸ್ಥೆಯು ದಿನಾಂಕ: 01/04/2017 ರಿಂದ ಕಾರ್ಯಾರಂಭವಾಗಿದೆ. ಈ ವ್ಯವಸ್ಥೆಯಲ್ಲಿ ಇಲಾಖೆಯ ಅಧಿಕಾರಿಗಳು ಖಜಾನೆ-2ರ ಜಾಲತಾಣ https://k2.karnataka.gov.in ಅನ್ನು ಸಂಪರ್ಕ ಹೊಂದಿ ಆಯಾ ಲೆಕ್ಕಶೀರ್ಷಿಕೆಗಳ ಅಡಿ ಚಲನ್ ಸೃಜಿಸಿ ಏಜೆನ್ಸಿ ಬ್ಯಾಂಕ್‌ಗೆ ಚೆಕ್/ಡಿಡಿ/ನಗದುಗಳನ್ನು ಸಲ್ಲಿಸಿದ ನಂತರ ಏಜೆನ್ಸಿ ಬ್ಯಾಂಕ್‌ಗಳು ನಗದೀಕರಣಗೊಂಡ ವಿವರಗಳನ್ನು ಆನ್‌ಲೈನ್ ಮೂಲಕ ಖಜಾನೆ-2ಗೆ ಒದಗಿಸುವುದು ಮತ್ತು ಖಜಾನೆ-2 ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ವಿಶಿಷ್ಟವಾದ ಸಂಖ್ಯೆಯುಳ್ಳ ಚಲನ್ ಅನ್ನು ಸೃಜಿಸಿ ಇಲಾಖೆಯ ಅಧಿಕಾರಿ (ಡಿಡಿಓ)ಗಳ ಲಾಗಿನ್‌ನಲ್ಲಿ ಪಥ Receipts → Reports for DDO → KTC-25 → Schedule of Receipts ರಲ್ಲಿ ವಿವರಗಳನ್ನು ಒದಗಿಸಿಕೊಡಲಾಗುತ್ತಿದೆ. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,

ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ರವರು ಅವರ ಅಧೀನದಲ್ಲಿ ಬರುವ ಡಿಡಿಓ ಗಳಿಗೆ ನಿಯಂತ್ರಣಾಧಿಕಾರಿಗಳಾಗಿದ್ದರಿಂದ ಎಲ್ಲಾ ಡಿಡಿಓಗಳ ವ್ಯಾಪ್ತಿಯಲ್ಲಿ ನಗದೀಕರಣಗೊಂಡ ವಿವರಗಳನ್ನು ನಿಯಂತ್ರಣಾಧಿಕಾರಿಗಳ ಲಾಗಿನ್‌ನಲ್ಲಿ Receipts → Reports for CO → KTC-25 → Schedule of Receipts ರಲ್ಲಿ ಲಭ್ಯವಿರುತ್ತವೆ.

ಈ ಹಿನ್ನೆಲೆಯಲ್ಲಿ ಮತ್ತು ಸರ್ಕಾರದ ದಿನಾಂಕ: 09/07/2019ರ ಸುತ್ತೋಲೆ (ಲಗತ್ತಿಸಲಾಗಿದೆ) ಯಲ್ಲಿ ನೀಡಿದ ಮಾರ್ಗದರ್ಶನಗಳಿಗನುಗುಣವಾಗಿ ಈ ಕೆಳಕಂಡ ಸೂಚನೆಗಳನ್ನು ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಅನುಪಾಲನೆಗಾಗಿ ನೀಡಲಾಗಿದೆ:

**I. ತೆರಿಗೆ ಜಮೆ ಮತ್ತು ಸಮನ್ವಯೀಕರಣ:**

1. ಜಮೆಗಳ ಲೆಕ್ಕ ಸಮನ್ವಯೀಕರಣ (Receipt Reconciliation): ಇಲಾಖೆಯ ಅಪರ ಆಯುಕ್ತರು (ಜಾರಿ), ಜಂಟಿ ಆಯುಕ್ತರುಗಳು, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ ಇವರು ಅವರ ಅಧೀನದಲ್ಲಿರುವ ಎಲ್ಲಾ ಕಛೇರಿಗಳ ನಿಯಂತ್ರಣಾಧಿಕಾರಿಗಳಾಗಿರುವುದರಿಂದ ರಾಜಸ್ವ ಜಮೆಗಳ ಸಮನ್ವಯೀಕರಣದ ಹೊಣೆಗಾರಿಕೆಯು ಸದರಿ ನಿಯಂತ್ರಣಾಧಿಕಾರಿಗಳದ್ದಾಗಿರುತ್ತದೆ. ಅದಕ್ಕನುಗುಣವಾಗಿ ಪ್ರತಿ ತಿಂಗಳು ಇಲಾಖೆಯ ಅಧಿಕಾರಿ (ಡಿಡಿಓ) ಗಳು ಖಜಾನೆ-2ರಲ್ಲಿ ಚಲನ್ ಸೃಜಿಸಿ ಚೆಕ್/ಡಿಡಿ/ನಗದುಗಳನ್ನು ಏಜೆನ್ಸಿ ಬ್ಯಾಂಕ್‌ಗೆ ಸಲ್ಲಿಸಿದ ವಿವರಗಳನ್ನು ಸದರಿ ಡಿಡಿಓಗಳ ಲಾಗಿನ್‌ರ ಪಥ Receipts → Reports for DDO → KTC-25 → Schedule of Receipts ಲಭ್ಯವಿರುವ ಜಮೆಗಳಿಗೆ ಸಂಬಂಧಿಸಿದಂತೆ ಚಲನ್ ರೆಫರೆನಸ್ ಸಂಖ್ಯೆ (Challan Reference Number), ಚಲನ್ ಸೃಜಿಸಿದ ದಿನಾಂಕ, ಸಂದಾಯದಾರರ ಹೆಸರು, ಮೊತ್ತ, ಪಾವತಿ ದಿನಾಂಕ, ಸ್ಕ್ರೋಲ್ ದಿನಾಂಕ, ಲೆಕ್ಕವಾದ ಚಲನ್ ಸಂಖ್ಯೆ ಈ ವಿವರಗಳೊಂದಿಗೆ ಪರಿಶೀಲಿಸಿ ನಗದೀಕರಣವಾಗದೇ ಇರುವ ಚೆಕ್/ಡಿಡಿ ಗಳು ಅಥವಾ ಖಜಾನೆಯಿಂದ ವಿಶಿಷ್ಟ ಸಂಖ್ಯೆಯುಳ್ಳ ಚಲನ್ ನಂಬರ್ ಇರದೇ ಇರುವ ವಿವರಗಳನ್ನು ಪರಿಶೀಲಿಸಿ ಏಜೆನ್ಸಿ ಬ್ಯಾಂಕ್‌ನೊಂದಿಗೆ ವ್ಯವಹರಿಸಿ ಖಜಾನೆ-2ರಿಂದ ಕೆಟಿಸಿ-25ರ ಮೂಲಕ ಚಲನ್ ಬರುವ ಹಾಗೆ ಯುಕ್ತ ಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. ಅಪರ ಆಯುಕ್ತರು/ಜಂಟಿ ಆಯುಕ್ತರುಗಳು ಅವರ ಅಧೀನ ಅಧಿಕಾರಿಗಳು ಈ ಸಮನ್ವಯೀಕರಣ ಕಾರ್ಯವನ್ನು ನಿಯತಕಾಲಿಕವಾಗಿ ಕೈಗೊಳ್ಳುತ್ತಿರುವುದರ ಬಗ್ಗೆ ಮೇಲುಸ್ತುವಾರಿ ಮಾಡತಕ್ಕದ್ದು. ಮುಂದುವರೆದು, ನಿಯಂತ್ರಣಾಧಿಕಾರಿಗಳ ಲಾಗಿನ್‌ನಲ್ಲಿ ಅವರ ಅಧೀನ ಅಧಿಕಾರಿಗಳ ನಗದೀಕರಣಗೊಂಡ ವಿವರಗೊಂಡ ಚೆಕ್/ಡಿಡಿ/ನಗದುಗಳ ವಿವರಗಳನ್ನು ವೀಕ್ಷಿಸಿ ಸಂಬಂಧಪಟ್ಟ ಅಧಿಕಾರಿಗಳ ಸಮನ್ವಯೀಕರಣದ ಕಾರ್ಯವನ್ನು ಅವಲೋಕಿಸಿ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು.

ಖಜಾನೆ-2ರಲ್ಲಿ ಲಭ್ಯವಿರುವ ಮತ್ತು ಜಮೆ ವಹಿವಾಟುಗಳ ಹಾಗೂ ಸಮನ್ವಯೀಕರಣಗೊಳಿಸಲು ಪೂರಕವಾಗಿರುವ ಮತ್ತು ಮುಖ್ಯವಾದ ಇತರ ವರದಿಗಳು ಈ ಕೆಳಕಂಡಂತಿವೆ:

2. **MIS ಜಮೆ ವಹಿವಾಟುಗಳ ಸಾರಾಂಶ ವರದಿ**

ಎ) ಈ ವರದಿಯು ಡಿಡಿಓ, ಸಿಓ ಹಾಗೂ ಸಿಸಿಓ ಲಾಗಿನ್‌ಗಳಲ್ಲಿ ಈ ಕೆಳಕಂಡ ಪಥದಲ್ಲಿ ಲಭ್ಯವಿರುತ್ತದೆ.
MIS Reports > Reports >MIS- Receipt Transaction Summary Report

ಬಿ) ಡಿಡಿಓ, ಸಿಓ, ಸಿಸಿಓರವರು ಸಂದಾಯದ ಹಂತವು ಯಾವುದೇ ಇರಲಿ ಎಲ್ಲಾ ಜಮೆಗಳ ವಿವರಗಳನ್ನು ವೀಕ್ಷಿಸಬಹುದು.

ಸಿ) ಇಡೀ ಆರ್ಥಿಕ ವರ್ಷದ ಅವಧಿಗೆ ಚಲನ್ ಡಾಟಾ ವರದಿಯನ್ನು ಸೃಜಿಸಬಹುದಾಗಿದೆ.

**II. ವೃತ್ತಿ ತೆರಿಗೆ/ಇತರೆ ತೆರಿಗೆಗಳನ್ನು NEFT/RTGS ಮೂಲಕ ಪಾವತಿಸುವ ಸೌಲಭ್ಯ:**

1. ಭಾರತ ಸರ್ಕಾರದ ಅಥವಾ ಇತರೆ ಯಾವುದೇ ರಾಜ್ಯ ಸರ್ಕಾರದ ಅಧಿಕಾರಿಗಳು ಬ್ಯಾಂಕ್ ಖಾತೆಯನ್ನು ಹೊಂದಿರದೇ ಇದ್ದಲ್ಲಿ ವೃತ್ತಿ ತೆರಿಗೆಯನ್ನು ಚೆಕ್ ಅಥವಾ ಡಿಡಿಯ ಮೂಲಕ ಸಂದಾಯ ಮಾಡಲು ಅವಕಾಶ ಮಾಡಿಕೊಡಲಾಗಿತ್ತು. ಆದರೆ ಈಗ ಖಜಾನೆ-2ರ ಮೂಲಕ ಯಾವುದೇ ಅಧಿಕಾರಿಯು ವೃತ್ತಿ ತೆರಿಗೆಯನ್ನು NEFT/RTGS ವಿಧಾನದನ್ವಯ ಯಾವುದೇ ಬ್ಯಾಂಕ್‌ಗಳ ಮೂಲಕ ಅಥವಾ ಭಾರತ ಸರ್ಕಾರದ ಲೆಕ್ಕ

ಮಹಾನಿಯಂತ್ರಕರ (Controller General of Accounts) ಅಧೀನದಲ್ಲಿರುವ PFMS (Public Financial Management System) ಮುಖಾಂತರ ಪಾವತಿಸಬಹುದಾಗಿದೆ. ಈ ವಿಷಯವನ್ನು ಎಲ್ಲಾ ವೃತ್ತಿ ತೆರಿಗೆ ಅಧಿಕಾರಿಗಳು ಸಂಬಂಧಪಟ್ಟ ಭಾರತ ಸರ್ಕಾರ ಅಥವಾ ಇತರೆ ಸರ್ಕಾರದ ಗಮನಕ್ಕೆ ತರುವುದು ಮತ್ತು ದಿನಾಂಕ: 15/10/2019ರಿಂದ ಯಾವುದೇ ಕಾರಣಕ್ಕಾಗಿ ಚೆಕ್ ಅಥವಾ ಡಿಡಿ ಮುಖಾಂತರ ತೆರಿಗೆ ಪಾವತಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ. NEFT/RTGS ಮೂಲಕ ತೆರಿಗೆ ಪಾವತಿಸುವ ವಿಧಾನದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು.

2. ಸದರಿ ತೆರಿಗೆಯನ್ನು Debit Card ಮುಖಾಂತರವೂ ಸಹಿತ ಸಂದಾಯ ಮಾಡಬಹುದಾಗಿದೆ.

3. OTC (Over the Counter) ಮುಖಾಂತರ ತೆರಿಗೆ ಪಾವತಿಸುವುದು: ಸರಕು ಮತ್ತು ಸೇವಾ ತೆರಿಗೆ ಕರದಾತರು ರೂ.10,000-00 ಕ್ಕಿಂತಲೂ ಕಡಿಮೆ ತೆರಿಗೆ ಪಾವತಿಸುವುದಾದಲ್ಲಿ ಈಗ ಅನುಸರಿಸುತ್ತಿರುವ ವಿಧಾನದಂತೆಯೇ ಏಜೆನ್ಸಿ ಬ್ಯಾಂಕ್‌ಗಳಾದ 1)SBI 2)Canara Bank 3)Syndicate Bank 4) Central Bank of India (5) Union Bank of India ಶಾಖೆಗಳಲ್ಲಿ ಜಮಾ ಮಾಡುವ ಮುನ್ನ ವಿವರಗಳನ್ನು ಖಜಾನೆ-2ರಲ್ಲಿ ನಮೂದಿಸಿ ಚಲನ್ ಸೃಜಿಸಿ ನಗದು ಅಥವಾ ಚೆಕ್‌ಗಳ ಮೂಲಕ ಪಾವತಿಸಬಹುದಾಗಿದೆ.

4. ಇಲಾಖೆಯ ಕೌಂಟರ್‌ಗಳ ಮೂಲಕ ಪಾವತಿ – ಇಲಾಖೆಯ ಕ್ಷೇತ್ರೀಯ ಕಛೇರಿಗಳಲ್ಲಿ ಸ್ವೀಕರಿಸಲಾದ ನಗದು ಅಥವಾ ಸ್ಥಳೀಯ ಬ್ಯಾಂಕ್‌ಗಳ ಮೇಲೆ ಸೆಳೆಯಲಾದ ಚೆಕ್‌ಗಳು ಹಾಗೂ ಡಿಡಿಗಳನ್ನು ಈಗಿರುವ ವಿಧಾನದಂತೆ ಇಲಾಖಾ DDO ರವರು ಎಲ್ಲಾ ಸ್ವೀಕೃತಿಗಳ ಸಂಬಂಧಿತ ಸಂಚಿತ ಚಲನ್ (Consolidated Challan) ಸೃಜಿಸಿ ಏಜೆನ್ಸಿ ಬ್ಯಾಂಕ್ ಮೂಲಕ ಜಮಾ ಮಾಡತಕ್ಕದ್ದು.

5. ಖಜಾನೆ-2ರಲ್ಲಿ ಸೃಜಿಸಲಾದ ಚಲನ್‌ಗಳ ವೈಶಿಷ್ಟ್ಯತೆಗಳನ್ನು ಸರ್ಕಾರದ ದಿನಾಂಕ: 09/07/2019ರ ಸುತ್ತೋಲೆಯ ಕಂಡಿಕೆ 11ರಲ್ಲಿ ನಮೂದಿಸಲಾಗಿದೆ. ಅವುಗಳನ್ನು ಗಮನಿಸಿ ಅನುಪಾಲನೆ ಮಾಡತಕ್ಕದ್ದು.

ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

Office of the Commissioner of Commercial Taxes (K) Bangalore-9 ★ Govt. of Karnataka

(ಶ್ರೀಕರ್ ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ಇವರಿಗೆ:

ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ